68 ಶ್ರೀ. ಹೆಚ್.ಎಸ್.ಮಹದೇವ ಪ್ರಸಾದ
ಮಾನ್ಯ ಪೌರಾಡಳಿತ ಸಚಿವರು

ಅ ಬೆಂಗಳೂರು ನಗರದ ಉಲ್ಲಾಳ ಮುಖ್ಯ ರಸ್ತೆ, ಮಲ್ಲತಹಳ್ಳಿ, ಜ್ಞಾನಜ್ಯೋತಿನಗರ ಬಡಾವಣೆ 1ನೇ ಕ್ರಾಸ್ ಬಳಿ ರಸ್ತೆಗೆ ಅಡ್ಡಲಾಗಿ ಕಾಂಪೌಂಡ್‌ನ್ನು ಅಕ್ರಮವಾಗಿ ನಿರ್ಮಿಸಿ, ಸಾರ್ವಜನಿಕರಿಗೆತೊಂದರೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದಯೇ;

ಜ್ಞಾನಜ್ಯೋತಿನಗರ ಬಡಾವಣೆ 1ನೇ ಕ್ರಾಸ್ ಬಳಿ ರಸ್ತೆಗೆ ಅಡ್ಡಲಾಗಿ ಕಾಂಪೌಡ್‌ನ್ನು ಅಕ್ರಮವಾಗಿ ನಿರ್ಮಿಸಿರುವುದಿಲ್ಲ. ಸದರಿ ಜಾಗವು ಶ್ರೀ ಎಂ.ನಟರಾಜ್‌ರವರ ಖಾಸಗಿ ಸ್ವತ್ತಾಗಿರುತ್ತದೆ.

ಆ ಹಾಗಿದ್ದಲ್ಲಿ ಸಾರ್ವಜನಿಕರ ಹಿತದೃಷ್ಟಿಯಿಂದ ಸದರಿ ಕಾಂಪೌಡ್ ತೆರವುಗೊಳಿಸಲು ಕೈಗೊಂಡಿರುವ ಕ್ರಮಗಳೇನು?

ಶ್ರೀ ನಟರಾಜ್ ರವರ ನಿವೇಶನದ ದಕ್ಷಿಣ ಹಾಗೂ ಪಶ್ಚಿಮದ ಕಡೆ ಇರುವ ಬಡಾವಣೆಗೆ ಸಂಪರ್ಕ ಕಲ್ಪಿಸಲು/ ಕೇವಲ 10–0 ಅಡಿ ರಸ್ತೆ ಇದ್ದು. ಅದನ್ನು ಅಗಲೀಕರಣ ಮಾಡುವಂತೆ ಸಾರ್ವಜನಿಕರು ಮನವಿ ಸಲ್ಲಿಸಿದ್ದಾರೆ ಸದರಿ ಮನವಿ ಆಧಾರದ ಮೇಲೆ ,ರಸ್ತೆಯ ವಿಸ್ತಾರಕ್ಕಾಗಿ 286.87 ಚದರ ಅಡಿ ವಿಸ್ತೀರ್ಣದ ಜಾಗವನ್ನು ಭೂಸ್ವಾಧೀನ ಮಾಡಿಕೊಳ್ಳಲು ಪಾಲಿಕೆಯು ಕ್ರಮ ತೆಗೆದುಕೊಳ್ಳತ್ತಿದೆ.

266 ಶ್ರೀ. ವೆಂಕಟಶಿವಾರೆಡ್ಡಿ ಜಿ.ಕೆ
ಮಾನ್ಯ ಗೃಹ ಸಚಿವರು

ಅ ಕೋಲಾರ ಜಿಲ್ಲೆಯ ಶ್ರೀನಿವಾಸಪುರ ಮತ ಕ್ಷೇತ್ರದ ಕಸಬಾ ಪೊಲೀಸ್ ಠಾಣೆಯನ್ನು ವಿಂಗಡಿಸಿ ಹೋಳೂರು ಅಥವಾ ಸುಗಟೂರು ಹೋಬಳಿಯಲ್ಲಿ ಹೊಸದಾಗಿ ಪೊಲೀಸ್ ಠಾಣೆಯನ್ನು ಮಂಜೂರು ಮಾಡುವ ಉದ್ದೇಶ ಸರ್ಕಾರದ ಮುಂದಿಯೇ.

ಕೋಲಾರ ಜಿಲ್ಲೆಯ ಶ್ರೀನಿವಾಸಪುರ ಮತ ಕ್ಷೇತ್ರಕ್ಕೆ ಕೋಲಾರ ತಾಲ್ಲೂಕಿನ ಹೋಳೂರು ಮತ್ತು ಸುಗಟೂರು ಹೋಬಳಿ ಸೇರಿರುತ್ತದೆ. ಕೋಲಾರ ಗ್ರಾಮಾಂತರ ಪೋಲಿಸ್ ಠಾಣಾ ವ್ಯಾಪ್ತಿಯಲ್ಲಿ ಈಗಾಗಲೇ ಸುಗುಟೂರು ಪೊಲೀಸ್ ಹೊರ ಠಾಣೆಯು ಕಾರ್ಯ ನಿರ್ವಹಿಸುತ್ತಿದ್ದು, ಸದರೊ ಸಗಟೂರು ಹೊರ ಠಾಣೆಯನ್ನು ಪೂರ್ಣ ಪ್ರಮಾಣದ ಪೊಲೀಸ್ ಠಾಣೆಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿರುತ್ತದೆ.

ಆ ಕಸಬಾ ಪೊಲೀಸ್ ಠಾಣೆಗೆ 7 ಹೋಬಳಿ ಸೇರುತ್ತಿರುವುದು ಹೆಚ್ಚು ಅಪರಾದ ಕೇಸುಗಳು ಮೇಲಿಂದ ಮೇಲೆ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.